# ಕನ್ನಡ ರಂಗಭೂಮಿ ಮತ್ತು ಭಕ್ತಿ ಪರಂಪರೆ

**ಜ್ಯೋತಿ ರೈ.***

**DOI: https://doi.org/10.5281/zenodo.22106771**

**ABSTRACT**

ಕನ್ನಡ ರಂಗಭೂಮಿಯನ್ನು ಪ್ರಭಾವಿಸಿದ ಪ್ರಮುಖ ವಿಚಾರಗಳಲ್ಲಿ ಭಕ್ತಿ ಚಳುವಳಿ ಅತ್ಯಂತ ಮಹತ್ವದ್ದು ಎಂದರೆ ತಪ್ಪಾಗಲಾರದು. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕೂಡ 12ನೇ ಶತಮಾನದ ನಂತರ ಮೂಡಿಬಂದ ಭಕ್ತಿ ಚಳುವಳಿ ಜನಸಾಮಾನ್ಯರನ್ನು ತನ್ನೊಳಗೆ ಸೇರಿಸಿಕೊಂಡು ಮುಂದುವರಿದ ಬಗೆ ಅತ್ಯದ್ಭುತವಾದುದು. 12ನೇ ಶತಮಾನದ ವಚನ ಚಳುವಳಿ ಮತ್ತು 15–16ನೇ ಶತಮಾನದ ಹರಿದಾಸ ಸಾಹಿತ್ಯವು ಕನ್ನಡ ಸಾಹಿತ್ಯವನ್ನು ಪಂಡಿತರ ಆಸ್ಥಾನದಿಂದ ಜನಸಾಮಾನ್ಯರ ಅಂಗಳಕ್ಕೆ ಕೊಂಡೊಯ್ಯುವಲ್ಲಿ ಪ್ರಮುಖ ಪಾತ್ರ ವಹಿಸಿದವು. ವಚನ ಚಳುವಳಿ ಮತ್ತು ದಾಸ ಸಾಹಿತ್ಯವು ಸಮಾಜದಲ್ಲಿ ಬಿತ್ತಿದ ಭಕ್ತಿ, ಸಮಾನತೆ ಮತ್ತು ಕಾಯಕ ತತ್ತ್ವಗಳು ಕನ್ನಡ ರಂಗಭೂಮಿಯ ಪ್ರಮುಖ ಕಥಾವಸ್ತುಗಳಾಗಿ ರೂಪುಗೊಂಡಿವೆ. ಪ್ರಾಚೀನ ಕಾಲದಿಂದಲೂ ಜನಸಾಮಾನ್ಯರಿಗೆ ಭಕ್ತಿಯ ಸಂದೇಶವನ್ನು ಮತ್ತು ನೈತಿಕ ಮೌಲ್ಯಗಳನ್ನು ತಲುಪಿಸಲು ರಂಗಕಲೆಗಳೇ ಅತ್ಯಂತ ಪ್ರಬಲ ಮಾಧ್ಯಮಗಳಾಗಿದ್ದವು.

ರಂಗಭೂಮಿಯ ಸಂಗೀತ ಮತ್ತು ಅಭಿನಯದ ಮೇಲೆ ಭಕ್ತಿ ಸಾಹಿತ್ಯದ ಪ್ರಭಾವ ದಟ್ಟವಾಗಿದೆ. ದಾಸರ ಕೀರ್ತನೆಗಳು ವೃತ್ತಿ ರಂಗಭೂಮಿಯ ರಂಗ ಗೀತೆಗಳಿಗೆ ಭದ್ರ ಬುನಾದಿಯನ್ನು ಒದಗಿಸಿದರೆ, ವಚನಗಳ ಸಂವಾದಾತ್ಮಕ ಶೈಲಿಯು ನಾಟಕದ ರಚನೆಗೆ ಸ್ಫೂರ್ತಿಯಾಯಿತು. ಕರ್ನಾಟಕದ ವಿಶಿಷ್ಟ ಜಾನಪದ ರಂಗಕಲೆಗಳಾದ ಯಕ್ಷಗಾನ, ಬಯಲಾಟ, ಸಣ್ಣಾಟ, ಮತ್ತು ದೊಡ್ಡಾಟಗಳು ಬಹುಪಾಲು ಪೌರಾಣಿಕ ಹಾಗೂ ಭಕ್ತಿ ಆಧಾರಿತ ಕಥೆಗಳನ್ನೇ ಅವಲಂಬಿಸಿವೆ. ಹರಿಕಥೆ ಮತ್ತು ತಾಳಮದ್ದಲೆಗಂತಹ ಕಲೆಗಳು ರಂಗಭೂಮಿಯ ಆರಂಭಿಕ ಸ್ವರೂಪಗಳಾಗಿದ್ದು ಭಕ್ತಿಪಂಥದ ಮೌಲ್ಯಗಳನ್ನು ಜನಮಾನಸದಲ್ಲಿ ಬಿತ್ತಿವೆ.

ವೃತ್ತಿ ರಂಗಭೂಮಿಯ ಯುಗದಲ್ಲಿ ಕೂಡ ಬಸವಣ್ಣ, ಅಕ್ಕಮಹಾದೇವಿ, ಭಕ್ತ ಪ್ರಹ್ಲಾದ, ಭಕ್ತ ಕುಂಬಾರ, ಮತ್ತು ದಾಸವರೇಣ್ಯರ ಜೀವನ ಚರಿತ್ರೆಗಳು ಯಶಸ್ವಿಯಾಗಿ ಪ್ರದರ್ಶನಗೊಂಡವು. ಆಧುನಿಕ ರಂಗಭೂಮಿಯು ಹೊಸ ದೃಷ್ಟಿಕೋನದಿಂದ ಭಕ್ತಿಪರಂಪರೆಯನ್ನು ಪುನರ್ ನಿರ್ಮಿಸಿವೆ. ಗಿರೀಶ್ ಕಾರ್ನಾಡರ ತಲೆದಂಡದಂತಹ ನಾಟಕಗಳು ಶರಣರ ಕಾಲದ

* **ಡಾ. ಜ್ಯೋತಿ ರೈ.**, ಸಹ ಪ್ರಾಧ್ಯಾಪಕರು, ಆಳ್ವಾಸ್ ಕಾಲೇಜು (ಸ್ವಾಯತ್ತ), ಮೂಡುಬಿದಿರೆ.

ಸಾಮಾಜಿಕ ಕ್ರಾಂತಿಯನ್ನು ಸಮಕಾಲೀನ ದೃಷ್ಟಿಕೋನದಿಂದ ರಂಗದ ಮೇಲೆ ತಂದಿವೆ. ಯಕ್ಷಗಾನವು ಭಕ್ತಿ ಪರಂಪರೆಗೆ ನೀಡಿದ ಕೊಡುಗೆ ಅನನ್ಯವಾದುದು. ಮಹಾವಿಷ್ಣುವಿನ ದಶಾವತಾರಗಳು ಯಕ್ಷಗಾನದಲ್ಲಿ ಪ್ರದರ್ಶನಗೊಂಡು ಜನ ಮಾನಸದಲ್ಲಿ ನೆಲೆಸಿತು. ಆಧುನಿಕ ಕಾಲದಲ್ಲಿ ವಿವಿಧ ಕ್ಷೇತ್ರಗಳಿಂದ ನಡೆಸಲ್ಪಡುವ ವಿವಿಧ ಯಕ್ಷಗಾನ ಮೇಳಗಳು ರಾಮಾಯಣ, ಮಹಾಭಾರತದ ಕಥೆಗಳನ್ನಾಧರಿಸಿದ ಯಕ್ಷಗಾನಗಳನ್ನೇ ಪ್ರದರ್ಶಿಸುತ್ತವೆ. ಕರಾವಳಿ ಕರ್ನಾಟಕದ ಅತ್ಯಂತ ಪ್ರಸಿದ್ಧ ಜಾನಪದ ಕಲೆಯಾದ 'ಭೂತಾರಾಧನೆ'ಯು ಜನಮಾನಸದಲ್ಲಿ ದೈವಭಕ್ತಿಯನ್ನು ನೆಲೆಗೊಳಿಸುವಲ್ಲಿ ಯಶಸ್ವಿಯಾಗಿದೆ.

ಒಟ್ಟಾರೆಯಾಗಿ ಭಕ್ತಿಪರಂಪರೆಯು ಕನ್ನಡ ರಂಗಭೂಮಿಗೆ ಕೇವಲ ಧಾರ್ಮಿಕ ಚೌಕಟ್ಟನ್ನು ಮಾತ್ರ ನೀಡದೆ, ಮಾನವೀಯತೆ, ಸಾಮಾಜಿಕ ಕಳಕಳಿ, ಮತ್ತು ಸಾಂಸ್ಕೃತಿಕ ಜಾಗೃತಿಯನ್ನು ಮೂಡಿಸುವ ಅದ್ಭುತ ಶಕ್ತಿಯನ್ನು ಒದಗಿಸಿದೆ ಎಂದರೆ ತಪ್ಪಾಗಲಾರದು.

**KEYWORDS:** ಕನ್ನಡ ರಂಗಭೂಮಿ, ಭಕ್ತಿ ಪರಂಪರೆ, ಜಾನಪದ ರಂಗಕಲೆಗಳು, ವೃತ್ತಿ ರಂಗಭೂಮಿ, ಸಾಮಾಜಿಕ ಜಾಗೃತಿ.

---

**ಕನ್ನಡ ರಂಗಭೂಮಿ ಮತ್ತು ಭಕ್ತಿ ಪರಂಪರೆ:**

ಕನ್ನಡ ರಂಗಭೂಮಿ ಮತ್ತು ಭಕ್ತಿಪಂಥಗಳ ನಡುವೆ ಅವಿನಾಭಾವ ಸಂಬಂಧವಿದೆ. ಭಾರತಾದ್ಯಂತ ವಿವಿಧ ಪ್ರದೇಶಗಳಲ್ಲಿ ಹೊಸ ರಂಗಪ್ರಕಾರವು ಹುಟ್ಟಿ, ರಂಗಭೂಮಿಯೆನ್ನುವ ಮಾಧ್ಯಮವು ಹಲವು ಹೊಸ ಸಾಧ್ಯತೆಗಳನ್ನು ತೆರೆದು ತೋರಿಸಿದ ಅವಧಿ ಕ್ರಿ.ಶ 15,16 ಮತ್ತು 17ನೇಯ ಶತಮಾನಗಳು. ನಾವು ಇವತ್ತು 'ಸಾಂಪ್ರದಾಯಿಕ' ಮತ್ತು ಜಾನಪದ ರಂಗಭೂಮಿಯೆಂದು ಕರೆಯುವ ಬಹುಪಾಲು ಬೇರುಗಳು ಈ ಅವಧಿಯಲ್ಲಿದೆ. ಸಾಮಾನ್ಯವಾಗಿ ಈ ಕಾಲಘಟ್ಟವನ್ನು ನಾವು ಭಕ್ತಿಯುಗ ಎಂಬುದಾಗಿಯೂ ಕರೆಯುತ್ತೇವೆ. ದಾಸರ ಕೀರ್ತನೆಗಳು, ಶರಣರ ವಚನಗಳು, ಸಾಂಗತ್ಯ, ರಗಳೆ, ಮುಂತಾದ ಭಕ್ತಿ ಸಂಬಂಧಿತ ಸಾಹಿತ್ಯವು ಈ ಅವಧಿಯಲ್ಲಿಯೇ ರಚನೆಯಾಯಿತು. ಈ ಸಾಹಿತ್ಯ ಮತ್ತು ಅನುಭಾವಿಗಳ ಜೀವನವು ಕನ್ನಡ ರಂಗಭೂಮಿಯನ್ನು ಪ್ರಭಾವಿಸಿತು. ಭಾರತದ ಉದ್ದಗಲಕ್ಕೂ ಈ ಅವಧಿಯ ಎಲ್ಲಾ ರಂಗಪ್ರಕಾರಗಳೂ ಒಂದಲ್ಲ ಒಂದು ರೀತಿಯಲ್ಲಿ ಭಕ್ತಿ ಪಂಥದೊಂದಿಗೆ ಸಂಬಂಧ ಇಟ್ಟುಕೊಂಡೇ ಹುಟ್ಟಿಕೊಂಡವು. ಕೆಲವು ನೇರವಾದ ಭಕ್ತಿಯ ಪ್ರಣಾಳಿಕೆಗಳಾದರೆ, ಕೆಲವು ಪರೋಕ್ಷವಾಗಿ ಪ್ರಭಾವಕ್ಕೆ ಒಳಗಾದವುಗಳು. ಕೆಲವನ್ನು ಆ ಭಕ್ತಿಪಂಥದ ಸಂತರು ಸೃಷ್ಟಿಸಿದರೆ ಇನ್ನು ಕೆಲವನ್ನು ಆ ಪಂಥದ ಸಾಮಾಜಿಕರು ಸೃಷ್ಟಿಸಿದರು.

ಕರ್ನಾಟಕದ ಯಕ್ಷಗಾನ, ನಾಟಕಗಳು, ಕೇರಳದ ಕೃಷ್ಣನಾಟ, ಕಥಕ್ಕಳಿ, ಆಂಧ್ರದ ಕೂಚಿಪುಡಿ; ತಮಿಳು ನಾಡಿನ ಭಾಗವತ ಮೇಳ, ಉತ್ತರಭಾರತದ ರಾಸಲೀಲಾ, ರಾಮಲೀಲಾಗಳು; ಒರಿಸ್ಸಾದ ಛಾವು; ಬಂಗಾಲದ ಜಾತ್ರಾ; ಅಸ್ಸಾಮಿನ ಅಂಕಿಯಾನಾಟ,– ಹೀಗೆ ನಾವು ಇವತ್ತು ಆಯಾ ಪ್ರಾಂತ್ಯದ ಪ್ರತಿನಿಧಿಯೆಂದು ಭಾವಿಸುವ ರಂಗಭೂಮಿಗಳೆಲ್ಲ ಈ ಕಾಲದಲ್ಲಿಯೇ ನಿರ್ಣಾಯಕ ರೂಪು ಪಡೆದಂಥವು. ಈ ಕಾಲದ ಬಹುತೇಕ ರಂಗಪ್ರಕಾರಗಳಿಗೆ ಪ್ರತ್ಯಕ್ಷ ಹಾಗೂ ಪರೋಕ್ಷ ಪ್ರೇರಣೆ ಕೊಟ್ಟ 'ಭಕ್ತಿಪಂಥ'ವೆಂಬ ಚಳುವಳಿಯ ಕೆಲವು ಪ್ರಾಥಮಿಕ ಲಕ್ಷಣಗಳನ್ನು ನಾವೀಗ ಗಮನಿಸಬೇಕು. ಈ ಕಾಲದಲ್ಲಿ ರಂಗಪ್ರಕಾರಗಳ ಹಾಗೆಯೇ ಭಕ್ತಿಪಂಥವೂ ಹಲವು ಶಾಖೋಪಶಾಖೆಗಳಲ್ಲಿ ಸಮಾಜದಲ್ಲಿ ತೆರೆದುಕೊಳ್ಳುತ್ತದೆ.

ಈ ಭಕ್ತಿ ಪರಂಪರೆಯ ಒಂದು ಎಳೆ ಕ್ರಿ.ಶ. 7 ರಿಂದ 9ನೇಯ ಶತಮಾನದ ತಮಿಳುನಾಡಿನಲ್ಲಿ ಶೈವ ಪಂಥದ ನಯನಾರ್ ಮತ್ತು ವೈಷ್ಣವ ಪಂಥದ ಆಳ್ವಾರುಗಳಲ್ಲಿ ಕಾಣಸಿಗುತ್ತದೆ. ಆಮೇಲೆ ಶೈವಪಂಥವು12ನೇ ಶತಮಾನದಲ್ಲಿ ಕರ್ನಾಟಕದಲ್ಲಿ ವೀರಶೈವ ಪಂಥವಾಗಿ ರೂಪುಗೊಂಡಿತು.

ವೈಷ್ಣವ ಶಾಖೆಯ ಮೂಲ 11ನೇಯ ಶತಮಾನದ ಧರ್ಮಸುಧಾರಕ – ರಾಮಾನುಜಾಚಾರ್ಯರು. ಅದಾದ ಮೇಲೆ ಈ ಪಂಥವು 13ನೇ ಶತಮಾನದ ಮರಾಠಿ ಸಂತರಾದ ಜ್ಞಾನೇಶ್ವರ, ನಾಮದೇವ ಮುಂತಾದವರಿಂದ ಮುಂದುವರಿಯಲ್ಪಡುತ್ತ 14ನೇ ಶತಮಾನದ ಆರಂಭದಲ್ಲಿ ರಮಾನಂದರೆಂಬ ಸಂತರ ಮೂಲಕ ಉತ್ತರಕ್ಕೆ ತಲುಪಿತು. 15 ರಿಂದ 17ನೇಯ ಶತಮಾನದವರೆಗೂ, ಕಬೀರ, ಚೈತನ್ಯ, ನಾನಕ, ಮೀರಾಬಾಯಿ, ಸೂರದಾಸ, ತುಲಸೀದಾಸ, ಮೊದಲಾದವರ ಮೂಲಕ ಉತ್ತರದಲ್ಲಿ ಈ ಚಳುವಳಿಯ ಅಬ್ಬರವು ಕಾಣಿಸಿಕೊಂಡಿತು. ಈ ಚಳುವಳಿಯ ಮಾಧ್ಯಮವಾಗಿ ಈ ಅವಧಿಯಲ್ಲಿ ರಂಗಭೂಮಿಯು ವ್ಯಾಪಕವಾಗಿ ಬಳಕೆಯಾಯಿತು.

ಭಕ್ತಿ ಚಳುವಳಿಯು ರಂಗಭೂಮಿಯನ್ನು ಕೇವಲ ಮನರಂಜನೆಯ ಸಾಧನವಾಗಿ ನೋಡದೆ, ಜನಸಾಮಾನ್ಯರನ್ನು ನೈತಿಕ ಮತ್ತು ಧಾರ್ಮಿಕ ಮಾರ್ಗದಲ್ಲಿ ಮುನ್ನಡೆಸುವ ಪ್ರೇರಣಾಶಕ್ತಿಯಾಯಿತು. ಒಂದು ಕಾಲದಲ್ಲಿ ರಾಜನ ಆಸ್ಥಾನಕ್ಕೆ ಸೀಮಿತವಾಗಿದ್ದ ಕಲೆ ದೇವಸ್ಥಾನದ ಪ್ರಾಂಗಣಗಳನ್ನು ತಲುಪಿ ಅಲ್ಲಿಂದ ಮುಂದುವರಿದು ಹಳ್ಳಿಗಳ ಬೀದಿ ಬೀದಿಗಳ ಮೂಲಕ ಮೆರೆದು ಜನಸಾಮಾನ್ಯರ ಆಸ್ತಿಯಾದುದು ಸಾಮಾನ್ಯ ವಿಚಾರವಲ್ಲ. ದೇವರನ್ನು ಒಲಿಸಿಕೊಳ್ಳಲು ಭಕ್ತಿಯೇ ಶ್ರೇಷ್ಠಮಾರ್ಗವೆಂದು ಸಾರಿದ ಸಂತರು, ದಾಸರು, ಶರಣರು ಮತ್ತು ಸೂಫಿಗಳು ತಮ್ಮ ತತ್ತ್ವ ಹಾಗೂ ಧರ್ಮದ ಪ್ರಚಾರಕ್ಕೆ ರಂಗಭೂಮಿ ಮತ್ತು ಪ್ರದರ್ಶನ ಕಲೆಗಳನ್ನು ಸಮರ್ಥವಾಗಿ ಬಳಸಿಕೊಂಡರು.

ಭಕ್ತಿಪಂಥಗಳು ತನ್ನೊಂದಿಗೆ ಸೃಷ್ಟಿಸಿದ ಸಾಹಿತ್ಯ ಮತ್ತು ರಂಗಭೂಮಿಗಳಲ್ಲಿ ಮುಖ್ಯವಾಗಿ ಎರಡು ಮಜಲುಗಳಿವೆ. ಒಂದು, ಭಕ್ತಿಪಂಥದ ಆಪ್ತವಲಯದಲ್ಲೇ ಪ್ರಚಾರದ ಉದ್ದೇಶಕ್ಕಾಗಿ ನಿರ್ಮಿತವಾದ ಪ್ರಕಾರಗಳು. ಇನ್ನೊಂದು ಈ ಚಳುವಳಿಯಿಂದ ಪ್ರಭಾವಿತರಾಗಿ ಸುಮಾರು ದೂರಗಳಲ್ಲಿ ಸೃಷ್ಟಿಯಾದ ಪ್ರಕಾರಗಳು. ಕನ್ನಡದ ವಚನ, ಮರಾಠಿಯ ಅಭಂಗ, ಕೀರ್ತನೆ, ಮೀರಾಭಜನೆ ಮೊದಲಾದುವು ಭಕ್ತಿಯ ಸಮೀಪವಲಯದ ಸಾಹಿತ್ಯ ಪ್ರಕಾರಗಳಾದರೆ ತಮಿಳುನಾಡಿನ ಭಾಗವತ ಮೇಳ, ಅಸ್ಸಾಮಿನ ಅಂಕಿಯಾನಾಟ, ಮಥುರಾದ ರಾಸಲೀಲಾ– ಮುಂತಾದುವು ಇಂತಹ ರಂಗಪ್ರಕಾರಗಳಿಗೆ ಉದಾಹರಣೆಗಳು. ಇನ್ನು ಭಕ್ತಿಯ ನೇರವಾಹಕವಾಗಿ ಕೆಲಸಮಾಡದ, ಆದರೆ ಸಾಂಸ್ಕೃತಿಕ ಸಂದರ್ಭದಿಂದ ಆವಿರ್ಭವಿಸಿದ ಸಾಹಿತ್ಯ– ರಂಗಭೂಮಿಗಳದ್ದು ಇನ್ನೊಂದು ಗುಂಪು. ಕನ್ನಡದಲ್ಲಿ ಕುಮಾರವ್ಯಾಸ ಅಂಥ ಪರೋಕ್ಷ ಪ್ರಭಾವವನ್ನು ಸೂಚಿಸಿದರೆ, ರಂಗಪ್ರಕಾರಗಳಲ್ಲಿ ಕರ್ನಾಟಕದ ಯಕ್ಷಗಾನ, ಕೇರಳದ ಕಥಕ್ಕಳಿ, ಒರಿಸ್ಸಾದ ಭಾವು ಮೊದಲಾದುವು ಇಂಥ ಪರೋಕ್ಷ ಪ್ರಭಾವದ ಉದಾಹರಣೆಗಳು.

ಭಕ್ತಿ ಪಂಥ, ಈ ರೀತಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ, ರಂಗಪ್ರಕಾರಗಳನ್ನು ಸೃಷ್ಟಿಸಿದ ಪ್ರಕ್ರಿಯೆಯನ್ನು ಹೀಗೆ ಸಂಗ್ರಹಿಸಬಹುದು; 14–15ನೇ ಶತಮಾನಗಳಲ್ಲಿ ಭಾರತಾದ್ಯಂತ ಭಕ್ತಿಯ ಹಲವು ಕೇಂದ್ರಗಳು ರೂಪುಗೊಂಡಿದ್ದವು. ಹಲವು ಪ್ರಾಂತ್ಯದ ಹಲವು ಸಂತರು ಕೂಡುತ್ತಿದ್ದ ಅಂಥ ಕೇಂದ್ರಗಳಲ್ಲೇ ಭಕ್ತಿ ರಂಗಭೂಮಿಯ ಮೊದಲ 'ನಾಟಕಕೃತಿ'ಗಳು ರಚಿತವಾದುವು. ಈ ಕೃತಿಗಳನ್ನು ಹಲವು ಸಂತರು ತಮ್ಮ ತಮ್ಮ ಪ್ರದೇಶಗಳಲ್ಲಿ ಪ್ರಯೋಗಕ್ಕೆ ತಂದರು. ಹಾಗೆ ಪ್ರಯೋಗವಾಗುವಾಗ ಆಯಾ ಪ್ರದೇಶಗಳಲ್ಲಿ ಪ್ರಚಲಿತವಾಗಿದ್ದ ಜಾನಪದ

ಆಟಗಳೂ, ಕಥನ ವಾಚನ ಸಂಪ್ರದಾಯಗಳೂ, ಕ್ರಿಯಾವಿಧಿ ಅಂಗಪ್ರಕಾರಗಳೂ ಸಮರ ಕಲೆಗಳೂ ಸೇರಿಕೊಂಡವು.

**ಭಕ್ತಿ ಚಳುವಳಿ ಮತ್ತು ಕಲೆ:** ಜನಸಾಮಾನ್ಯನಿಗೆ ಕನಸಿನ ಗಂಟಾಗಿದ್ದು ಕೇವಲ ಸಂಸ್ಕೃತ ಭಾಷೆಗೆ ಸೀಮಿತವಾಗಿದ್ದ ವೇದ, ಉಪನಿಷತ್ತುಗಳ ಸಾರವನ್ನು ಸುಲಭ ಸರಳವಾದ ಪ್ರಾದೇಶಿಕ ಭಾಷೆಗಳಲ್ಲಿ ಜನಸಾಮಾನ್ಯರಿಗೆ ಉಣಬಡಿಸಿದ ಹೆಗ್ಗಳಿಕೆ ಈ ಭಕ್ತಿ ಚಳುವಳಿಯದ್ದು. ಕೇವಲ ಉಪದೇಶಗಳಿಗಿಂತ ಕಥೆ, ಸಂಗೀತ, ನೃತ್ಯ ಮತ್ತು ನಾಟಕಗಳ ಮೂಲಕ ಹೇಳಿದಾಗ ಅದು ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುತ್ತದೆಂಬುದನ್ನು ಭಕ್ತಿಪಂಥದ ಹರಿಕಾರರು ಚೆನ್ನಾಗಿ ಅರಿತಿದ್ದರು. ದೃಶ್ಯಮಾಧ್ಯಮದ ಶಕ್ತಿಯನ್ನು ಚೆನ್ನಾಗಿ ಅರ್ಥಮಾಡಿಕೊಂಡ ಇವರು ಅದನ್ನು ಸಮರ್ಥವಾಗಿ ಬಳಸಿದರು. ಸಂಸ್ಕೃತಕ್ಕೆ ಸೀಮಿತವಾಗಿದ್ದ ನಾಟಕಗಳು ಮತ್ತು ಕಾವ್ಯಗಳು ಭಕ್ತಿಯುಗದಲ್ಲಿ ಕನ್ನಡ, ತೆಲುಗು, ತಮಿಳು, ಹಿಂದಿ, ಮರಾಠಿ ಮುಂತಾದ ಜನಸಾಮಾನ್ಯರಿಗೆ ಅರ್ಥವಾಗುವ ದೇಸೀ ಭಾಷೆಗಳಲ್ಲಿ ಪ್ರದರ್ಶನಗೊಳ್ಳಲಾರಂಭಿಸಿದವು. ಕಲಾಪ್ರದರ್ಶನವೆಂಬುದು ಜಾತಿ ತಾರತಮ್ಯವನ್ನು ಮರೆತು ಜನರನ್ನು ಒಗ್ಗೂಡಿಸುವ ಒಂದು ಸಾಧನವಾಗಿ ಕೂಡ ಬಳಕೆಯಾಯಿತು. ಭಜನೆಗಳು, ಕೀರ್ತನೆಗಳು, ಮತ್ತು ಬೀದಿನಾಟಕಗಳಲ್ಲಿ ಜನರು ಜಾತಿಮತಗಳ ಭೇದಭಾವವಿಲ್ಲದೆ ಪ್ರದರ್ಶನಗಳಲ್ಲಿ ಪಾಲ್ಗೊಳ್ಳುತ್ತಿದ್ದರು.

**ಯಕ್ಷಗಾನ ಮತ್ತು ತಾಳಮದ್ದಲೆ:** ವಚನಕಾರರು ಮತ್ತು ಹರಿದಾಸರು ಹಾಕಿಕೊಟ್ಟ ಭಕ್ತಿಯ ತಳಹದಿಯ ಮೇಲೆ ಅನೇಕ ರಂಗಪ್ರಕಾರಗಳು ರೂಪುತಳೆದುವು. ಕರ್ನಾಟಕ ಕರಾವಳಿ ಮತ್ತು ಮಲೆನಾಡು ಭಾಗದಲ್ಲಿ 'ಗಂಡುಕಲೆ'ಯೆಂದು ಪ್ರಸಿದ್ಧಿಯನ್ನು ಪಡೆದಿದ್ದ ನಮ್ಮ ಹೆಮ್ಮೆಯ ಕಲೆಯಾದ ಯಕ್ಷಗಾನವು ಸಂಪೂರ್ಣವಾಗಿ ಭಕ್ತಿ ಮತ್ತು ಪೌರಾಣಿಕ ಕತೆಯ ಮೇಲೆ ನಿಂತಿದೆ.

**ದಶಾವತಾರ ಆಟಗಳು:** ಯಕ್ಷಗಾನವನ್ನು ಮೊದಲು 'ದಶಾವತಾರ ಆಟ'ಗಳೆಂದು ಕರೆಯಲಾಗುತ್ತಿತ್ತು. ಮಹಾವಿಷ್ಣುವಿನ ಹತ್ತು ಅವತಾರಗಳ ಕತೆಗಳನ್ನು ಯಕ್ಷಗಾನದಲ್ಲಿ ಪ್ರದರ್ಶಿಸುವ ಮೂಲಕ ಜನರಲ್ಲಿ ಭಕ್ತಿ-ಭಾವವನ್ನು ಜಾಗೃತಗೊಳಿಸಲಾಗುತ್ತಿತ್ತು.

**ಧಾರ್ಮಿಕ ಚೌಕಟ್ಟು:** ಯಕ್ಷಗಾನದ ಪ್ರತಿಯೊಂದು ಪ್ರದರ್ಶನದಲ್ಲಿಯೂ ಚೌಕಿಪೂಜೆ, ಗಣಪತಿ ಸ್ತುತಿ (ಪೂರ್ವರಂಗ), ಮತ್ತು ಪ್ರದರ್ಶನದ ಕೊನೆಗೆ ಮಂಗಳಾರತಿಯ ಮೂಲಕವೇ ಮುಕ್ತಾಯಗೊಳ್ಳುತ್ತದೆ.

**ತಾಳಮದ್ದಲೆ:** ಯಕ್ಷಗಾನದ ವೇಷಭೂಷಣಗಳಿಲ್ಲದೆ ಕೇವಲ ವಾಚಿಕಾಭಿನಯ(ಮಾತುಗಾರಿಕೆ) ಮೂಲಕ ರಾಮಾಯಣ, ಮಹಾಭಾರತ, ಭಾಗವತದ ಕಥೆಗಳನ್ನು ವಿಶ್ಲೇಷಿಸುವ ತಾಳಮದ್ದಲೆಯು ಜ್ಞಾನ ಮತ್ತು ಭಕ್ತಿಯ ಸಮ್ಮಿಲನವಾಗಿದೆ. ಇಲ್ಲಿ ಪಾತ್ರಧಾರಿಗೆ ಪುರಾಣದ ಕುರಿತು ಅಗಾಧವಾದ ಜ್ಞಾನದ ಅವಶ್ಯಕತೆಯಿದೆ.

**ಕೀರ್ತನೆ ಮತ್ತು ಹರಿಕಥೆ:** ಕೀರ್ತನಸಾಹಿತ್ಯವು ಭಾರತೀಯ ಭಕ್ತಿಪರಂಪರೆಯ ಪ್ರಮುಖ ಸಂಗೀತಮಯ ಹಾಗೂ ಆಧ್ಯಾತ್ಮಿಕ ಅಭಿವ್ಯಕ್ತಿಯಾಗಿದೆ. ಇದು ಭಗವದ್ಭಕ್ತಿ, ಆತ್ಮನಿವೇದನೆ ಮತ್ತು ನೈತಿಕ ಮೌಲ್ಯಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಪ್ರಮುಖ ಮಾಧ್ಯಮವಾಗಿದೆ. ತಬಲ, ಹಾರ್ಮೋನಿಯಂ, ಕರತಾಳ ಮುಂತಾದ ಪರಿಕರಗಳನ್ನು ಬಳಸಿಕೊಂಡು ಇದನ್ನು ಹಾಡುತ್ತಾರೆ. ನಾರದಮುನಿಗಳಿಂದ ಆರಂಭವಾಯಿತೆಂದು ನಂಬಲಾಗುವ ಈ ಕಲೆಯು, ದಾಸ ಸಾಹಿತ್ಯದ ಕಾಲದಲ್ಲಿ ಉತ್ತುಂಗಕ್ಕೇರಿತು. ಹರಿದಾಸರಾದ ಪುರಂದರದಾಸರು, ಕನಕದಾಸರು, ವಿಜಯದಾಸರು ತಮ್ಮ ದೇವರ ನಾಮಗಳನ್ನು ಮತ್ತು

ಕೀರ್ತನೆಗಳನ್ನು ತಾಳ, ತಂಬೂರಿ ಹಿಡಿದು ಊರೂರು ತಿರುಗಿ ಹಾಡುತ್ತಿದ್ದರು.

ಹರಿಕಥೆಯು ಹಿಂದೂ ಧಾರ್ಮಿಕ ಪ್ರವಚನದ ಒಂದು ರೂಪ. ತೆಲುಗಿನಲ್ಲಿ ಇದು 'ಹರಿಕಥಾ ಕಾಲಕ್ಷೇಪಮ್' ಎಂದು ಕರೆಯಲ್ಪಡುತ್ತದೆ. ಇದರಲ್ಲಿ ಕತೆಗಾರನು ಒಬ್ಬ ಸಂತನ ಜೀವನ ಅಥವಾ ಭಾರತೀಯ ಮಹಾಕಾವ್ಯದಲ್ಲಿ ಬರುವ ಯಾವುದಾದರೊಂದು ಕತೆಯನ್ನು ಪ್ರವಚನಮಾಡುತ್ತಾನೆ. ಹರಿಕಥೆಯು ಕಥೆ, ಕಾವ್ಯ, ನಾಟಕ, ನೃತ್ಯ, ಮತ್ತು ತತ್ತ್ವಶಾಸ್ತ್ರ ಸೇರಿರುವ ಒಂದು ಸಂಯುಕ್ತ ಕಲೆಯಾಗಿದೆ. ಇದು ಆಂಧ್ರಪ್ರದೇಶ ಮತ್ತು ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತದಲ್ಲಿದೆ. ಯಾವುದೇ ಹಿಂದೂ ಧಾರ್ಮಿಕ ವಿಷಯವು ಹರಿಕಥೆಯ ವಿಷಯವಾಗಬಹುದು. ನಾಲ್ಕೈದು ದಶಕಗಳ ಮೊದಲು ಕೂಡ ಹರಿಕಥೆಯು ಒಂದು ಜನಪ್ರಿಯ ಮನರಂಜನಾ ಮಾಧ್ಯಮವಾಗಿತ್ತು. ಜನರಲ್ಲಿ ಸಾಂಸ್ಕೃತಿಕ, ಶೈಕ್ಷಣಿಕ, ಮತ್ತು ಧಾರ್ಮಿಕಮೌಲ್ಯಗಳನ್ನು ಪಸರಿಸುವಲ್ಲಿ ಇದು ಪ್ರಮುಖ ಪಾತ್ರವನ್ನು ವಹಿಸಿತು. ಜನರ ಮನಸ್ಸುಗಳಲ್ಲಿ ಸತ್ಯ ಮತ್ತು ಸದ್ಗುಣ ನಿಷ್ಠೆಗಳನ್ನು ತುಂಬುವುದು ಹರಿಕಥೆಯ ಮುಖ್ಯಗುರಿಯಾಗಿದೆ. ದೇವಾಲಯಗಳಲ್ಲಿ ನಿರಂತರವಾಗಿ ಏಳುದಿನಗಳವರೆಗೆ 'ಹರಿಕಥಾ ಸಪ್ತಾಹ'ಗಳು ನಡೆಯುತ್ತಿದ್ದವು. ಅಷ್ಟೂ ದಿನಗಳು ಕೂಡ ಹರಿಕಥೆ ಕೇಳಲು ಜನಸೇರುತ್ತಿದ್ದುದು ಇದರ ಜನಪ್ರಿಯತೆಯನ್ನು ತಿಳಿಸುತ್ತದೆ.

**ವಚನ ಸಾಹಿತ್ಯ ಮತ್ತು ರಂಗಭೂಮಿ:** ವಚನಸಾಹಿತ್ಯವು ಕನ್ನಡ ಸಾಹಿತ್ಯದ ಅಮೂಲ್ಯಕೊಡುಗೆಯಾಗಿದೆ. ಸಾಮಾಜಿಕ, ಧಾರ್ಮಿಕ ಹಾಗೂ ಸಾಹಿತ್ಯಕ ಕ್ರಾಂತಿಯ ರೂಪದಲ್ಲಿ ಮೈದಳೆದ ಈ ವಚನಗಳು 12ನೇ ಶತಮಾನದ ನಂತರ ಜನಜೀವನದಲ್ಲಿ ಬೀರಿದ ಪ್ರಭಾವ ಅಪಾರವಾದುದು. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಚನ್ನಬಸವಣ್ಣ, ಸಿದ್ಧರಾಮ ಮುಂತಾದ ಶರಣರು ರಚಿಸಿದ ವಚನಗಳು ಸಾಮಾಜಿಕ ಸಮಾನತೆ, ಶ್ರಮದ ಗೌರವ, ಮಾನವೀಯತೆ ಮತ್ತು ಆಧ್ಯಾತ್ಮಿಕತೆಯನ್ನು ಜನಮನದಲ್ಲಿ ಬಿತ್ತುವ ಕೆಲಸವನ್ನು ಮಾಡಿದುವು. ಇವು ಕೇವಲ ಸಾಹಿತ್ಯವಾಗಿ ಉಳಿಯದೆ ತಮ್ಮಲ್ಲಿರುವ ಸಂಭಾಷಣಾ ಶೈಲಿ ಹಾಗೂ ಜೀವಂತಿಕೆಯಿಂದ ರಂಗಭೂಮಿಗೆ ಅತ್ಯುತ್ತಮವಾದ ಕಥಾವಸ್ತುವನ್ನು ಒದಗಿಸಿಕೊಟ್ಟಿವೆ.

ಆಧುನಿಕ ಕನ್ನಡ ರಂಗಭೂಮಿಯಲ್ಲಿ ವಚನಚಳುವಳಿಯ ಆಶಯಗಳನ್ನು ಆಧರಿಸಿ ಅನೇಕ ಪ್ರಸಿದ್ಧ ನಾಟಕಗಳು ರಚಿತವಾಗಿವೆ. ಉದಾಹರಣೆಗೆ: ಗಿರೀಶ್ ಕಾರ್ನಾಡರ 'ತಲೆದಂಡ', ಪಿ.ಲಂಕೇಶರ 'ಸಂಕ್ರಾಂತಿ', ಎಚ್.ಎಸ್. ಶಿವಪ್ರಕಾಶರ 'ಮಹಾಚೈತ್ರ' ಮತ್ತು ಚಂದ್ರಶೇಖರ ಕಂಬಾರರ 'ಶಿವರಾತ್ರಿ'. ಈ ನಾಟಕಗಳು ಜಾತಿಪದ್ಧತಿ, ಮೌಢ್ಯ ಮತ್ತು ಸಾಮಾಜಿಕ ಅಸಮಾನತೆಯ ವಿರುದ್ಧ ಶರಣರು ನಡೆಸಿದ ಹೋರಾಟವನ್ನು ಸಮಕಾಲೀನ ದೃಷ್ಟಿಕೋನದಲ್ಲಿ ರಂಗದ ಮೇಲೆ ಪ್ರದರ್ಶಿಸಿವೆ. ಕರ್ನಾಟಕದ ಪ್ರತಿಷ್ಠಿತ ರಂಗಾಯಣದಂತಹ ಸಂಸ್ಥೆಗಳಲ್ಲಿ ವಚನಗಳನ್ನು ಆಧರಿಸಿದ ನಾಟಕಗಳು ಮತ್ತು ಬೀದಿ ನಾಟಕಗಳು ಪ್ರದರ್ಶನ ಕಂಡಿವೆ.

**ಜಾನಪದ ರಂಗಭೂಮಿ:** ಜಾನಪದ ರಂಗಭೂಮಿಯು ಗ್ರಾಮೀಣ ಸಂಸ್ಕೃತಿ ಆಚರಣೆ ಮತ್ತು ನಂಬಿಕೆಗಳಿಂದ ಹುಟ್ಟಿ ಬಂದ ಕಲಾಪ್ರಕಾರವಾಗಿದೆ. ಹಾಡು, ಕುಣಿತ, ವೇಷಭೂಷಣ ಮತ್ತು ಸಂಭಾಷಣೆಗಳ ಮೂಲಕ ಪುರಾಣ ಅಥವಾ ಸಾಮಾಜಿಕ ಕಥೆಗಳನ್ನು ಪ್ರದರ್ಶಿಸುವುದು ಇದರ ಮುಖ್ಯ ಲಕ್ಷಣ. ಜಾನಪದ ರಂಗಭೂಮಿಯು ವೇದಿಕೆ ಅಥವಾ ಸಭಾಂಗಣಗಳಿಗೆ ಸೀಮಿತವಾಗಿರದೆ ಹಳ್ಳಿಯ ಬಯಲು, ಜಾತ್ರೆಗಳು ಮತ್ತು ದೇವಸ್ಥಾನದ ಅಂಗಳಗಳೇ ಇದರ ರಂಗಮಂದಿರಗಳಾಗಿವೆ. ಇತಿಹಾಸದ ಪುಟಗಳನ್ನು ತಿರುವಿದಾಗ

ಮಾನವನ ಆದಿಮ ಕುಣಿತಗಳು, ದೈವಾರಾಧನೆ ಮತ್ತು ಪ್ರಕೃತಿಯನ್ನು ಆರಾಧಿಸುವ ಕ್ರಿಯೆಗಳೇ ಈ ರಂಗಕಲೆಗೆ ಮೂಲ ಪ್ರೇರಣೆಯಾಗಿವೆ. ಕರ್ನಾಟಕದಲ್ಲಿ ಯಕ್ಷಗಾನ ಬಯಲಾಟ, ದೈವಾರಾಧನೆ, ದೊಡ್ಡಾಟ, ಸಣ್ಣಾಟ ಮತ್ತು ತೊಗಲು ಗೊಂಬೆಯಾಟಗಳು ಜಾನಪದ ರಂಗಭೂಮಿಯ ಪ್ರಮುಖ ರೂಪಗಳಾಗಿವೆ.

**ದೈವಾರಾಧನೆ:** ಭೂತದ ಕೋಲ, ನಾಗನೃತ್ಯ, ಮುಂತಾದುವು ದೈವಿಕ ಅನುಕರಣೆಯ ಮೂಲಕ ಅಭಿವ್ಯಕ್ತಗೊಳ್ಳುತ್ತವೆ.

**ದೊಡ್ಡಾಟ ಮತ್ತು ಸಣ್ಣಾಟ:** ಉತ್ತರ ಕರ್ನಾಟಕದ ಈ ಕಲಾಪ್ರಕಾರಗಳು ಪ್ರಧಾನವಾಗಿ ಪೌರಾಣಿಕ ಕಥೆಗಳನ್ನೇ (ಕುರುಕ್ಷೇತ್ರ, ಲಂಕಾದಹನ, ಕಂಸವಧೆ) ಆಧರಿಸಿವೆ.

**ತೊಗಲು ಗೊಂಬೆಯಾಟ:** ಇದು ಗ್ರಾಮೀಣ ಪ್ರದೇಶಗಳಲ್ಲಿ ರಾಮಾಯಣ, ಮಹಾಭಾರತದ ಕಥೆಗಳನ್ನು ತೊಗಲಿನಿಂದ ತಯಾರಿಸಿದ ಬೊಂಬೆಗಳ ಮೂಲಕ ಆಡಿ ತೋರಿಸುವ ಪ್ರಾಚೀನ ಕಲೆ.

**ಶ್ರೀಕೃಷ್ಣ ಪಾರಿಜಾತ:** ಇದು ಭಕ್ತಿ ಮತ್ತು ಶೃಂಗಾರ ರಸಗಳೆರಡನ್ನೂ ಒಳಗೊಂಡ ಉತ್ತರ ಕರ್ನಾಟಕದ ಅತ್ಯಂತ ಜನಪ್ರಿಯ ಬಯಲಾಟ ಪ್ರಕಾರ. ಕೃಷ್ಣ, ರುಕ್ಮಿಣಿ ಮತ್ತು ಸತ್ಯಭಾಮೆಯರ ಕಥೆಯ ಮೂಲಕ ದೇವರ ಲೀಲೆಗಳನ್ನು ಇದು ಪ್ರದರ್ಶಿಸುತ್ತದೆ.

**ಬೀಸುವ ಪದಗಳು, ಸೋಬಾನೆ ಪದಗಳು:** ಇವು ನೇರ ರಂಗಭೂಮಿಯಲ್ಲದಿದ್ದರೂ ದೈನಂದಿನ ಕೆಲಸಗಳನ್ನು ಮಾಡುವಾಗ ದೇವರನ್ನು ಸ್ತುತಿಸುವ ಹಾಡುಗಳ ಮೂಲಕ ಮಹಿಳೆಯರು ತಮ್ಮದೇ ಆದ ಸಾಂಸ್ಕೃತಿಕ ಪ್ರದರ್ಶನವನ್ನು ನೀಡುತ್ತಿದ್ದರು.

ಒಟ್ಟಿನಲ್ಲಿ ಜಾನಪದ ರಂಗಭೂಮಿ ಪ್ರಾಚೀನ ಇತಿಹಾಸವನ್ನು ಹೊಂದಿದ್ದು, ವೈವಿಧ್ಯಕ್ಕೆ ಹಾಗೂ ವೈಶಿಷ್ಟ್ಯಕ್ಕೆ ಹೆಸರಾಗಿ ಅಪೂರ್ವ ಮನೋರಂಜನಾ ಸಾಧನವಾಗಿ ಜೊತೆಯಲ್ಲಿಯೇ ನಮ್ಮ ಪ್ರಾಚೀನ ಸಂಸ್ಕೃತಿಯ ಹಲವು ಅಂಶಗಳನ್ನು ಮೈಗೂಡಿಸಿಕೊಂಡು ಬಂದಿದೆ.

**ರಂಗಭೂಮಿಯ ಮೂಲಕ ಭಕ್ತಿಪರಂಪರೆ ತಂದ ಸಾಮಾಜಿಕ ಕ್ರಾಂತಿ:** ಭಕ್ತಿಪರಂಪರೆಯು ಕೇವಲ ದೇವಸ್ಥಾನದ ಗರ್ಭಗುಡಿಗೆ ಸೀಮಿತವಾಗಿದ್ದ ದೇವರನ್ನು, ರಂಗಭೂಮಿಯ ಮೂಲಕ ಬೀದಿಗೆ ತಂದು ಎಲ್ಲರಿಗೂ ದರ್ಶನ ಮಾಡಿಸಿತು. ಇದು ಸಮಾಜದಲ್ಲಿ ದೊಡ್ಡ ಒಂದು ಬದಲಾವಣೆಗೆ ಕಾರಣವಾಯಿತು.

**ಜಾತಿಪದ್ಧತಿಯ ನಿರ್ಮೂಲನೆ:** ನಾಟಕಗಳಲ್ಲಿ ಭಾಗವಹಿಸಲು ಅಥವಾ ವೀಕ್ಷಿಸಲು ಜಾತಿಯ ಹಂಗು ಇರಲಿಲ್ಲ. ಕನಕದಾಸರಂತಹ ಕೆಳಜಾತಿಯವರು ರಚಿಸಿದ ಕೀರ್ತನೆಗಳನ್ನು ಬ್ರಾಹ್ಮಣರೂ ಸೇರಿದಂತೆ ಎಲ್ಲರೂ ಆಡತೊಡಗಿದರು.

**ನೈತಿಕ ಶಿಕ್ಷಣ:** ಪ್ರಹ್ಲಾದ ಚರಿತ್ರೆ, ಹರಿಶ್ಚಂದ್ರ ಕಾವ್ಯ, ಕುರುಕ್ಷೇತ್ರ, ಮುಂತಾದ ನಾಟಕಗಳು ಜನಸಾಮಾನ್ಯರಿಗೆ ಮನೋರಂಜನೆಯ ಜೊತೆಯಲ್ಲಿ ಧರ್ಮ, ಸತ್ಯ ಮತ್ತು ನೈತಿಕತೆಯ ಪಾಠವನ್ನು ಕಲಾತ್ಮಕವಾಗಿ ನೀಡಿದವು.

**ಮಹಿಳಾ ಪ್ರಾತಿನಿಧ್ಯ:** ಮೀರಾಬಾಯಿ, ಅಕ್ಕಮಹಾದೇವಿ ಮುಂತಾದ ಭಕ್ತಿ ಶಿರೋಮಣಿಗಳ ಪಾತ್ರಗಳು ರಂಗಭೂಮಿಯ ಮೇಲೆ ಬಂದಾಗ ಮಹಿಳೆಯರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಹೊಸ ಆಯಾಮ ಸಿಕ್ಕಿತು.

**ಸಮೂಹ ಮಾಧ್ಯಮವಾಗಿ ಕಲೆ:** ಆಧುನಿಕ ಕಾಲದ ಪತ್ರಿಕೆ ಅಥವಾ ದೂರದರ್ಶನಗಳಿಗಿಂತ ಮಿಗಿಲಾಗಿ, ಆ ಕಾಲದಲ್ಲಿ ಜನರನ್ನು ತಲುಪುವ, ಅವರನ್ನು ಎಚ್ಚರಿಸುವ

ಅತೀ ದೊಡ್ಡ ಜವಾಬ್ದಾರಿಯುತ ಮಾಧ್ಯಮವಾಗಿ ಭಕ್ತಿಪ್ರಧಾನ ರಂಗಭೂಮಿ ಕೆಲಸ ಮಾಡಿತು.

**ಆಧುನಿಕ ರಂಗಭೂಮಿ ಮತ್ತು ಭಕ್ತಿ ಪರಂಪರೆ:** ಇಂದಿನ ಆಧುನಿಕ ರಂಗಭೂಮಿಯು ಸಹ ಭಕ್ತಿಪರಂಪರೆಯ ಬೇರುಗಳಿಂದ ಕಳಚಿಕೊಂಡಿಲ್ಲ. ರಂಗಭೀಷ್ಮ ಖ್ಯಾತಿಯ ನಿರ್ದೇಶಕ ಬಿ.ವಿ. ಕಾರಂತರು ತಮ್ಮ ನಾಟಕಗಳಲ್ಲಿ ರಂಗಗೀತೆಗಳು ಮತ್ತು ಭಜನಾಶೈಲಿಯನ್ನು ಅಳವಡಿಸಿ 'ಭಾರತೀಯ ರಂಗಭೂಮಿ'ಗೆ ಹೊಸ ಸ್ಪರ್ಶವನ್ನು ನೀಡಿದರು. ಚಂದ್ರಶೇಖರ ಕಂಬಾರರ 'ಜೋಕುಮಾರಸ್ವಾಮಿ', 'ಸಿರಿಸಂಪಿಗೆ' ಮುಂತಾದ ನಾಟಕಗಳು ಜನಪದ ಭಕ್ತಿ ಮತ್ತು ನಂಬಿಕೆಗಳ ಮೂಲಕವೇ ಹೆಣೆಯಲ್ಪಟ್ಟಿವೆ. ಪುರಂದರದಾಸರು, ಕನಕದಾಸರು, ಬಸವಣ್ಣ, ಯೇಸುಕ್ರಿಸ್ತ, ಮುಂತಾದವರ ಜೀವನ ಚರಿತ್ರೆಗಳು ಇಂದಿಗೂ ನೂರಾರು ನಾಟಕಗಳಾಗಿ ಸಂಗೀತರೂಪಕಗಳಾಗಿ ಪ್ರದರ್ಶನಗೊಳ್ಳುತ್ತಲೇ ಇವೆ.

ಒಟ್ಟಾರೆಯಾಗಿ ಹೇಳುವುದಾದರೆ ರಂಗಭೂಮಿ ಮತ್ತು ಭಕ್ತಿಪರಂಪರೆಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಭಕ್ತಿ ಚಳುವಳಿಯು ರಂಗಭೂಮಿಗೆ 'ವಿಷಯ' ಮತ್ತು 'ಉದ್ದೇಶ'ವನ್ನು ಒದಗಿಸಿದರೆ ರಂಗಭೂಮಿಯು ಭಕ್ತಿ ಚಳುವಳಿಗೆ ವಾಹಕವಾಗಿ ಕೆಲಸಮಾಡಿತು. ಕೇವಲ ಮೇಲ್ಜಾತಿಯವರಿಗೆ ಮತ್ತು ಕೆಲವೇ ಕೆಲವು ಮಂದಿ ಅಕ್ಷರಸ್ಥರಿಗೆ ಮಾತ್ರ ಸೀಮಿತವಾಗಿದ್ದ ಪುರಾಣ, ದೇವರ ಕತೆಗಳನ್ನು ರಂಗಭೂಮಿಯು ತನ್ನ ವೇಷ, ಬಣ್ಣ, ಸಂಗೀತ ಮತ್ತು ಭಾವಗಳ ಮೂಲಕ ಜನಸಾಮಾನ್ಯರ ಹೃದಯಕ್ಕೆ ತಲುಪಿಸುವಲ್ಲಿ ಯಶಸ್ವಿಯಾಯಿತು. ಮಧ್ಯಯುಗದಲ್ಲಿ ರಂಗಭೂಮಿಯು ಸಮಾಜದಲ್ಲಿ ಉಂಟುಮಾಡಿದ ರಂಗಕ್ರಾಂತಿಯಿಂದಾಗಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಪುರಾಣದ ಕತೆಗಳು ತಲುಪಲು ಸಾಧ್ಯವಾಯಿತು. ಇಂದಿಗೂ ಭಾರತದ ಹಳ್ಳಿ-ಹಳ್ಳಿಗಳಲ್ಲಿ ನಡೆಯುವ ಜಾತ್ರೆ, ಉತ್ಸವಗಳಲ್ಲಿ ಪ್ರದರ್ಶನಗೊಳ್ಳುವ ಪೌರಾಣಿಕ ನಾಟಕಗಳು ಈ ಭವ್ಯವಾದ ಪರಂಪರೆಯ ಜೀವಂತ ಸಾಕ್ಷಿಯಾಗಿ ಉಳಿದಿವೆ.

**ಪರಾಮರ್ಶನ ಗ್ರಂಥಗಳು:**


1. ಅಕ್ಷರ ಕೆ.ವಿ., (2000), ರಂಗಪ್ರಪಂಚ, ಹೊಸದೆಹಲಿ: ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ.
2. ವೆಂಕಟರಾಮ್ ಎನ್.ಎಸ್., (2001), ನವಕರ್ನಾಟಕ ಕೈಪಿಡಿ ರಂಗಭೂಮಿ, ಬೆಂಗಳೂರು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್.
3. ವೈಕುಂಠರಾಜು ಬಿ.ವಿ., (1997), ಕನ್ನಡ ರಂಗಭೂಮಿ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.